## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

**ಸಿ.ಸಿ ನಂ: 40/2025**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀ ಅಹಮ್ಮದ್ ಬಿನ್ ಜಲಾಲ್ ಅಹಮ್ಮದ್, ವಯಸ್ಸುಃ 45 ವರ್ಷ, ವಾಸಃ ಎಂ.ಬಿ ಸಾವೀಲ್, ಸಂತೇಮೈದಾನದ ಹತ್ತಿರ, ಚನ್ನಗಿರಿ. | | ಶ್ರೀ ಜಿ.ಎಸ್. ಶರತ್ ಬಾಬು ಬಿನ್ ರುದ್ರಪ್ಪ , ವಯಸ್ಸುಃ 50 ವರ್ಷ, ವೃತ್ತಿಃ ಗುತ್ತಿಗೆದಾರರು, ವಾಸಃ ಹಲಕನಾಳ್ ಗ್ರಾಮ, ತಾಃಚನ್ನಗಿರಿ. |

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ. 351 ರಡಿ ಆರೋಪಿ ಹೇಳಿಕೆ.**

ಪ್ರಶ್ನೆ 1 : ಫ್ರಾ.ಸಾ:1 ಅಹಮ್ಮದ್ ರವರು ತಮ್ಮ ಸಾಕ್ಷದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಂದ ವ್ಯವಹಾರದ ಸಲುವಾಗಿ ದಿಃ10.01.2025 ರೂಃ 7,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 2 : ಫ್ರಾ.ಸಾ:1 ರವರು ಮುಂದುವರಿದು, "ಸದರಿ ಸಾಲದ ಮರು ಪಾವತಿಗಾಗಿ ನೀವು ಕರ್ನಾಟಕ ಬ್ಯಾಂಕ್ ಪಾಂಡೋಮಟ್ಟಿ ಶಾಖೆಯ ಪೋಸ್ಟ್ ಡೆಟೆಡ್ ಚೆಕ್ ಸಂಃ005590 ನ್ನು ರೂಃ 7,00,000/- ಹಣಕ್ಕೆ ದಿನಾಂಕಃ26.03.2025 ಎಂದು ನಮೂದಿಸಿ ತನಗೆ ನೀಡಿದ್ದೀರಿ." ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 3 : ಫ್ರಾ.ಸಾ:1 ರವರು ಮುಂದುವರಿದು, "ಸದರಿ ಚೆಕ್ಕನ್ನು ದಿಃ 03.04.2025 ರಂದು ತಾನು ತನ್ನ ಖಾತೆ ಇರುವ ಎಚ್‌ಡಿಎಫ್‌ಸಿ., ಬ್ಯಾಂಕ್ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಚೆಕ್ಕು ದಿಃ 03.04.2025 ರಂದು "Amt in Words/Figure Differ" ಎಂಬ

ಹಿಂಬರದೊಂದಿಗೆ ಅಮಾನ್ಯಗೊಂಡಿರುತ್ತದೆ” ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 4 : ಪ್ರಾ.ಸಾ:1 ರವರು ಮುಂದುವರಿದು, ಮೇಲ್ಕಂಡ ವಿಚಾರವಾಗಿ ದಿನಾಂಕಃ 21.04.2025 ರಂದು ತಮ್ಮ ವಕೀಲರ ಮುಖಾಂತರ ಲೀಗಲ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನ್ನು ದಿಃ25.04.2025 ರಂದು ನೀವು ಸ್ವೀಕರಿಸಿದ್ದು, ನಂತರ ನೀವು ಸದರಿ ನೋಟಿಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಚೆಕ್ಕಿನ ಹಣವನ್ನು ಸಹ ಮರುಪಾವತಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 5 : ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರ :

ಪ್ರಶ್ನೆ 6 : ನೀವು ಹೆಚ್ಚಿಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ :

(ಆರೋಪಿತನ ಹೇಳಿಕೆಗಳನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಢೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ

Sd/-

ದಿನಾಂಕಃ 22-11-2025.

**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಚನ್ನಗಿರಿ.**

**ಆರೋಪಿತನ ಸಹಿ:-**